DFA/1063344

ಕ್ರ.ಸಂ. 03

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಹರಿಶ್ ಕುಮಾರ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ವಿಷಯ:**

ಮೈಸೂರಲ್ಲಿ ನಕಲಿ ಡ್ರೈವಿಂಗ್ ಲೈಸೆನ್ಸ್ ವಿತರಣೆ ಜಾಲಪತ್ತೆ – ದುಡ್ಡು ಕೊಟ್ರೆ ಯಾರಿಗೆ ಬೇಕಾದರೂ ಸಿಗುತ್ತೆ ಪರವಾನಗಿ – ಜಾಮೀನಿಗಾಗಿ ಹೈಕೋರ್ಟ್ ಕದ ತಟ್ಟಿದ ಆರೋಪಿಗಳು ಕುರಿತು ವಿಜಯವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಹಣ ಪಡೆದು ನಕಲಿ ಡ್ರೈವಿಂಗ್ ಲೈಸೆನ್ಸ್ (ಡಿಎಲ್) ವಿತರಿಸುತ್ತಿದ್ದ ಜಾಲ ಪತ್ತೆಯಾಗಿದ್ದು ಖಾಸಗಿ ಡ್ರೈವಿಂಗ್ ಸ್ಕೂಲ್ ಜೊತೆ ಪ್ರಾದೇಶಿಕ ಸಾರಿಗೆ ಕಛೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೈಜೋಡಿಸಿರುವ ಅನುಮಾನ ವ್ಯಕ್ತವಾಗಿದೆ ಈ ಸಂಬಂಧ ಮೈಸೂರಿನ ಲಕ್ಷ್ಮಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ 37 ದಿನ ಕಳೆದರೂ ಆರೋಪಿಗಳ ಬಂಧನವಾಗಿಲ್ಲದಿರುವುದು, ಅದಕ್ಕೆ ಬದಲಾಗಿ ಅಕ್ರಮಕ್ಕೆ ಸಾಕ್ಷಿ ಒದಗಿಸಿದ ದೂರದಾರರಿಗೆ ನೋಟಿಸ್ ಜಾರಿಗೊಳಿಸಿರುವ ತನಿಖಾಧಿಕಾರಿ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಕೇಳಿರುವುದು ಚರ್ಚೆಗೆ ಗ್ರಾಸವಾಗಿರುತ್ತದೆ.

ಮೈಸೂರು ನಗರದ ವೀಣಾ ಡ್ರೈವಿಂಗ್ ಸ್ಕೂಲ್‌ನ ಬಾಬು, ವೀಣಾ ಮತ್ತು ಮೈಸೂರು ಪಶ್ಚಿಮ ಆರ್‌ಟಿಓ ಹಾಗೂ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ ವಕೀಲರಾದ ಕೆ.ಆರ್ ರಾಜಕುಮಾರ್ ಎಂಬುವರು ನೀಡಿರುವ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ಆದರೆ ಆರ್‌ಟಿಓ ಅಧಿಕಾರಿ ಬಾಬು ಮತ್ತು ವೀಣಾ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಮೈಸೂರಿನ ಸೆಷನ್ ನ್ಯಾಯಾಲಯ ವಜಾಗೊಳಿಸಿದೆ ಹೀಗಾಗಿ ಎಲ್ಲಾ ಆರೋಪಿಗಳು ಹೈಕೋರ್ಟಿಗೆ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಸಲ್ಲಿಸಿದ್ದಾರೆ ಎನ್ನುವ ಶಂಕೆ ಇದ್ದು ನಾಲ್ವರಿಗೆ ವಿತರಿಸಿರುವ ನಕಲಿ ಕಾರ್ಡ್‌ಗಳನ್ನು ಸಾಕ್ಷಿ ರೂಪದಲ್ಲಿ ದೂರದಾರರು ಒದಗಿಸಿದ್ದಾರೆ. ಕಾರ್ಡುಗಳಲ್ಲಿರುವ ಫೋಟೋ ವಿಳಾಸ ಸೇರಿ ಇನ್ನಿತರ ವಿವರಗಳು ಸುಳ್ಳು ಎನ್ನಲಾಗಿದೆ ರಾಜ್ಯದ ಎಲ್ಲಾ ಆರ್‌ಟಿಓ ಕಛೇರಿಗಳಿಗೆ ಡಿಎಲ್ ವಿತರಿಸುವ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಬೆಂಗಳೂರಿನಲ್ಲಿರುವ ಆ ಸಂಸ್ಥೆ ಪ್ರತಿ ಕಛೇರಿಗೆ ಇಂತಿಷ್ಟು ಕಾರ್ಡುಗಳನ್ನು ಪೂರೈಸುತ್ತದೆ. ಅದಕ್ಕೆ ನಕಲಿ ಸಹಿ ಮಾಡಿ ವಿತರಣೆ ಮಾಡಲಾಗಿದೆ ಅದರಲ್ಲಿ ಫೋಟೋ ಮತ್ತು ಸಹಿ ನಕಲಿಯಾಗಿದೆ ಇಲಾಖೆಗೆ ಸೇರಿದ ಅಸಲಿ ಕಾರ್ಡ್ ಆಗಿದ್ದರಿಂದ ನಕಲಿ ಡಿಎಲ್ ಎಂಬುದು ಯಾರಿಗೂ ಅನುಮಾನ ಬರುವುದಿಲ್ಲ.

ದಯಮಾಡಿ ಸರ್ಕಾರ ನಕಲಿ ಡ್ರೈವಿಂಗ್ ಲೈಸೆನ್ಸ್ ವಿತರಣೆ ಜಾಲದ ಬಗ್ಗೆ ಸೂಕ್ತ ತನಿಖೆ ಕೈಗೊಂಡು ಈ ತರಹದ ಘಟನೆ ರಾಜ್ಯದ ಯಾವ ಯಾವ ಆರ್‌ಟಿಓ ಕಛೇರಿಗಳಲ್ಲಿ ನಡೆದಿದೆ ಎಂಬುದನ್ನು ಸಹ ತನಿಖೆಗೆ ಒಳಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

**ಉತ್ತರ:**

ಈ ವಿಷಯದ ಬಗ್ಗೆ ಮೈಸೂರಿನ ಲಕ್ಷ್ಮೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಈವರೆವಿಗೂ ಪೊಲೀಸರಿಂದ ತನಿಖಾ ವರದಿಯು ಸ್ವೀಕೃತವಾಗಿರುವುದಿಲ್ಲ. ಈ ಬಗ್ಗೆ ತನಿಖಾ ವರದಿಯು ಸ್ವೀಕೃತಗೊಂಡ ತಕ್ಷಣ ತಪ್ಪಿತಸ್ಥರ ವಿರುದ್ಧ ಕೂಡಲೇ ಕ್ರಮ ವಹಿಸಲಾಗುವುದು.

ಮುಂದುವರೆದು, ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ) ಇವರಿಗೆ ಈ ಬಗ್ಗೆ



Generated from eOffice by B SREERAMULU, TD-MIN(BS), TRANSPORT MINISTER, Trans on 13/02/2023 02:16 PM

ಕೂಲಂಕಷವಾಗಿ ಪರಿಶೀಲಿಸಿ ವರದಿ ನೀಡಲು ತಿಳಿಸಿದ್ದು, ಸದರಿಯವರು ವರದಿ ಸಲ್ಲಿಸಿದ್ದು, ವರದಿಯಲ್ಲಿ ಖೊಟ್ಟಿ ಚಾಲನಾ ಅನುಜ್ಞಾ ಪತ್ರಗಳ ಕುರಿತಂತೆ ನಾಲ್ಕು (4) ಡ್ರೈವಿಂಗ್ ಲೈಸೆನ್ಸ್‌ಗಳು ಖೊಟ್ಟಿಯಾಗಿರುವುದು ಕಂಡುಬಂದಿದ್ದು, ಸದರಿ ಲೈಸೆನ್ಸ್‌ನಲ್ಲಿನ ವಿಳಾಸಕ್ಕೆ ಮೋಟಾರು ವಾಹನ ನಿರೀಕ್ಷಕರು ಭೇಟಿ ನೀಡಿದಾಗ ಸದರಿ ವಿಳಾಸದಲ್ಲಿ ಲೈಸೆನ್ಸ್ ಪಡೆದಿರುವವರು ಇಲ್ಲದಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಪೊಲೀಸ್ ಇಲಾಖೆಯ ಅಪರಾಧ ತನಿಖಾ ವಿಭಾಗದಿಂದ ಕೂಡ ತನಿಖೆ ನಡೆಯುತ್ತಿದ್ದು, ಪೊಲೀಸರು ನೀಡುವ ವರದಿಯನ್ನಾಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬಹುದು ಎಂದು ತಿಳಿಸಿರುತ್ತಾರೆ.

ಮೈಸೂರು (ಪಶ್ಚಿಮ) ಮತ್ತು ಮೈಸೂರು (ಪೂರ್ವ) ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯ ಎಲ್ಲಾ ಡ್ರೈವಿಂಗ್ ಸ್ಕೂಲ್‌ಗಳನ್ನು ಸಮಗ್ರವಾಗಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು, ಇಲಾಖೆಯ ಬೇರೆ ಬೇರೆ ಕಛೇರಿಗಳಿಂದ ಹಿರಿಯ ಮೋಟಾರು ವಾಹನ ನಿರೀಕ್ಷಕರು / ಮೋಟಾರು ವಾಹನ ನಿರೀಕ್ಷಕರುಗಳನ್ನು ನಿಯೋಜಿಸಲಾಗಿದೆ. ಈ ಬಗ್ಗೆ ವರದಿ ಬಂದ ತಕ್ಷಣ ಸಂಬಂಧಪಟ್ಟ ಡ್ರೈವಿಂಗ್ ಶಾಲೆಗಳ ಮೇಲೆ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸದರಿ ಪ್ರಕರಣಗಳು ಮೈಸೂರು ಜಿಲ್ಲೆ ಹೊರತುಪಡಿಸಿ ರಾಜ್ಯದ ಇನ್ನಿತರೆ ಜಿಲ್ಲೆಗಳಲ್ಲಿ ನಡೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಟಿಡಿ 4 ಟಿಡಿಕ್ಯೂ 2023

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 13/02/2023 02:16 PM